

بسم اللهِ الرّحمٰنِ الرّحيم

# ಅಲ್ಲಾಹನು ಯಾರಿಗೂ ಅವನ ಶಕ್ತಿಗೆ ಮೀರಿದ ಹೊಣೆಗಾರಿಕೆಯನ್ನು ನೀಡುವುದಿಲ್ಲ. ಅವರವರ ಸಾಮರ್ಥ್ಯಕ್ಕನುಸಾರವಾಗಿ ಒಳಿತಿನಲ್ಲಿ ಮುಂದೆ ಮುಂದೆ ಸಾಗಿರಿ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **30-01-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು لَا يُكَلِّفُ اللّٰهُ نَفْسًا إِلَّا وُسْعَهَا **ಲಾ ಯುಕಲ್ಲಿಫುಲ್ಲಾಹು ನಫ್‌ಸನ್ ಇಲ್ಲಾ ಉಸ್‌ಅಹಾ– 'ಅಲ್ಲಾಹನು ಯಾರ ಮೇಲೆಯೂ ಅವನ ಶಕ್ತಿಗೆ ಮೀರಿದ ಹೊಣೆಗಾರಿಕೆ ಹೊರಿಸುವುದಿಲ್ಲ'** ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಮನುಷ್ಯನ ಶಕ್ತಿ ಸಾಮರ್ಥ್ಯಗಳಿಗೆ ಮೀರಿದ ಯಾವ ಆಜ್ಞೆಯನ್ನೂ ಅಲ್ಲಾಹನು ನೀಡುವುದಿಲ್ಲ. ಅಲ್ಲಾಹನು ಮನುಷ್ಯನ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾದ ಆಜ್ಞೆ ನೀಡುವಾಗ ಅವುಗಳನ್ನು ಪಾಲಿಸುವುದು ಮನುಷ್ಯರ ಹೊಣೆಗಾರಿಕೆಯಾಗಿದೆ. ಒಬ್ಬ ಸತ್ಯವಿಶ್ವಾಸಿ 'ಇಂತಿಂತಹ ಆಜ್ಞೆ ನನ್ನ ಶಕ್ತಿಗೆ ಮೀರಿದ್ದಾಗಿದೆ' ಎಂದು ನೆವನ ಹೇಳಲು ಸಾಧ್ಯವಿಲ್ಲ. ಅಲ್ಲಾಹನನ್ನು ನಂಬುವುದಾದರೆ, 'ಎಲ್ಲಾ ಆಜ್ಞೆಗಳು ನಮ್ಮ ಶಕ್ತಿಗೆ ಅನುಸಾರವಾಗಿದೆ' ಎಂಬ ಅವನ ಮಾತನ್ನು ಸಹ ನಂಬಬೇಕಾದುದು ಆವಶ್ಯಕವಾಗಿದೆ. ನಾವು ನಮ್ಮ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅಲ್ಲಾಹನ ಆಜ್ಞೆಗಳನ್ನು ಅನುಷ್ಠಿಸಲು ಪ್ರಯತ್ನ ಮಾಡಬೇಕು. ಇಸ್ಲಾಮ್ ನೀಡುವ ಸುಂದರ ಉಪದೇಶ ಹೇಗಿದೆ ಎಂದರೆ, ಅಲ್ಲಾಹನು "ನನ್ನ ಆಜ್ಞೆಯನ್ನು ಅನುಷ್ಠಿಸಿ ಅದರ ಉನ್ನತ ಮಟ್ಟವನ್ನು ನೀವು ಆವಶ್ಯಕವಾಗಿಯೂ ಗಳಿಸಬೇಕು ಇಲ್ಲವಾದರೆ ನೀವು ಶಿಕ್ಷೆಗೆ ಅರ್ಹರಾಗುವಿರಿ" ಎಂದು ಹೇಳಲಿಲ್ಲ. ಬದಲಾಗಿ, ಅಲ್ಲಾಹನು ಹೀಗೆ ಹೇಳುತ್ತಾನೆ. ಪ್ರತಿಯೊಂದು ಆಜ್ಞೆಯನ್ನು ನಿಮ್ಮ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅನುಷ್ಠಿಸುವುದು ಆವಶ್ಯಕವಾಗಿದೆ ಎಂದು. ನಾವು ಮನುಷ್ಯರ ಸ್ಥಿತಿ ಮತ್ತು ಅವರ ಶಕ್ತಿ ಸಾಮರ್ಥ್ಯಗಳ ಬಗ್ಗೆ ಪರಿಶೀಲಿಸುವಾಗ ನಮಗೆ ತಿಳಿಯುವುದೇನೆಂದರೆ ಪ್ರತಿಯೊಬ್ಬ ಮನುಷ್ಯನ ಸ್ಥಿತಿಯೂ ಬೇರೆ ಬೇರೆ ಯಾಗಿದೆ. ಅವನ ಬುದ್ಧಿಶಕ್ತಿ, ಅವನ ಶಾರೀರಿಕ ಅವಸ್ಥೆ, ಅವನ ಜ್ಞಾನ ಮತ್ತು ತಿಳುವಳಿಕೆ ಮೊದಲಾದವು ವಿಭಿನ್ನವಾಗಿವೆ. ಅಲ್ಲಾಹನು ಮನುಷ್ಯನ ಬಲಹೀನತೆ ಅವನ ಸ್ಥಿತಿ ಮತ್ತು ಅವನ ಆವಶ್ಯಕತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ತನ್ನ ಆಜ್ಞೆಗಳಲ್ಲಿ ಎಂತಹ ಸರಳತೆ ಸೃಷ್ಟಿಸಿರುವನೆಂದರೆ ಅದರ ಅತ್ಯಂತ ಕನಿಷ್ಠ ಮಟ್ಟ ಮತ್ತು ಗರಿಷ್ಠ ಮಟ್ಟವೂ ನಿಶ್ಚಯಿಸಲಾಗಿದೆ. ಇಂತಹ ಸರಳತೆ ಇರುವಾಗ ನನ್ನ ಆಜ್ಞೆಗಳನ್ನು ಪ್ರಾಮಾಣಿಕವಾಗಿ ಪಾಲಿಸಿರಿ ಎಂದು ಅಲ್ಲಾಹನು ಹೇಳುತ್ತಾನೆ. ಮನುಷ್ಯನ ಪ್ರಕೃತಿಯನ್ನು ಗಮನದಲ್ಲಿ ಇರಿಸಿಕೊಂಡು ಇಸ್ಲಾಮ್ ಇಂತಹ ಸುಂದರ ಉಪದೇಶಗಳನ್ನು ನೀಡಿದೆ. ಅಲ್ಲಾಹನು ತನ್ನ ಆಜ್ಞೆಗಳನ್ನು ಪಾಲಿಸಲು ನಿಶ್ಚಯವಾಗಿಯೂ ಸತ್ಯವಿಶ್ವಾಸಿಗೆ ಆಜ್ಞಾಪಿಸಿದ್ದಾನೆ. ಆದರೆ ಆ ಆಜ್ಞೆಗಳ ಪಾಲನೆಯ ಕನಿಷ್ಠ ಮಟ್ಟ ಸಹ ನಿಗದಿಪಡಿಸಿ ಅದನ್ನು ಪಾಲಿಸದೆ ನೆವನ ಹೇಳುವವರಿಗೆ ಸಂದರ್ಭ ಸಿಗದಂತೆ ಸಹ ಮಾಡಿದ್ದಾನೆ. ಅಲ್ಲಾಹನು ಹೇಳಿರುವುದು ನಿಮ್ಮ ಸ್ಥಿತಿಗೆ ಅನುಸಾರವಾಗಿ ಈ ಮಟ್ಟವನ್ನು ನಿಗದಿಪಡಿಸಲಾಗಿದೆ. ನೀವು ಅದನ್ನು ತಪ್ಪದೆ ಪಾಲಿಸಬೇಕು ಎಂದು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೀಗೆ ಹೇಳಿದ್ದಾರೆ:

"ವಿವೇಕಕ್ಕೆ ವಿರುದ್ಧವಾಗಿರುವ ಮಾತುಗಳನ್ನು ನಂಬಲು ಯಾರೂ ನಿರ್ಬಂಧಿತನಾಗುವುದಿಲ್ಲ. ಮನುಷ್ಯ ಶಕ್ತಿಗೆ ಮೀರಿದ ಯಾವುದೇ ಧಾರ್ಮಿಕ ಆಜ್ಞೆ ನೀಡಿ ಕಷ್ಟ ಪಡಿಸಿಲ್ಲ. **ಲಾ ಯುಕಲ್ಲಿಫುಲ್ಲಾಹು ನಫ್‌ಸನ್ ಇಲ್ಲಾ ಉಸ್‌ಅಹಾ** ಎಂಬ ಆಜ್ಞೆ ಅಲ್ಲಾಹನು ಯಾರಿಗೂ ಅವನ ಶಕ್ತಿಗೆ ಮೀರಿದ ಹೊಣೆಗಾರಿಕೆ ಹೊರಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತದೆ. ಅಲ್ಲಾಹನು ಮನುಷ್ಯನಿಗೆ ನೀಡಿರುವ ಅಂಗಾಂಗಗಳ ಶಕ್ತಿಸಾಮರ್ಥ್ಯಗಳಿಗೆ ಅನುಸಾರವಾಗಿ ತನ್ನ ಆಜ್ಞೆಗಳನ್ನು ಪಾಲಿಸಬೇಕೆಂಬ ಪ್ರತೀಕ್ಷೆ ಅಲ್ಲಾಹನು ಮಾಡಿದ್ದಾನೆ. ಅಲ್ಲಾಹನು ಮನುಷ್ಯರ ಹಾಗೆ ತನ್ನ ಭಯವನ್ನು ಜನರಲ್ಲಿ ಸ್ಥಾಪಿಸಲಿಕ್ಕಾಗಿ ಆಜ್ಞೆಗಳನ್ನು ನೀಡಿರುವುದಿಲ್ಲ. ಬದಲಾಗಿ ಅಲ್ಲಾಹನು ತನ್ನ ದಾಸರಿಗೆ ಅಸಂಖ್ಯಾತ ಅನುಗ್ರಹಗಳನ್ನು ಸುರಿಸಿದ್ದಾನೆ. ಪ್ರತಿಯೊಬ್ಬನೂ ತನ್ನ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಆಜ್ಞೆಗಳನ್ನು ಪಾಲಿಸುವನೆಂಬ ಪ್ರತೀಕ್ಷೆ ಅಲ್ಲಾಹನು ಹೊಂದಿದ್ದಾನೆ. ಅದಕ್ಕಾಗಿ ಅವನು ಲೆಕ್ಕವಿಲ್ಲದಷ್ಟು ಪ್ರತಿಫಲ ನೀಡುತ್ತಾನೆ. ತನ್ನ ದಾಸರ ಬಗ್ಗೆ ಇಷ್ಟು ಸಹಾನುಭೂತಿ ಹೊಂದಿರುವ ಅಲ್ಲಾಹನ ಆಜ್ಞೆಗಳನ್ನು ತನ್ನ ಶಕ್ತಿಸಾಮರ್ಥ್ಯಗಳಿಗೆ ಅನುಸಾರವಾಗಿ ಈಡೇರಿಸಲು ಪ್ರಯತ್ನ ಮಾಡಬೇಕಾದುದು ಮನುಷ್ಯನ ಕರ್ತವ್ಯವಲ್ಲವೇ? ಖಂಡಿತವಾಗಿಯೂ ಒಬ್ಬ ನೈಜ ಸತ್ಯವಿಶ್ವಾಸಿ ಅದಕ್ಕೋಸ್ಕರ ಪ್ರಯತ್ನ ಮಾಡುವನು. ಅವನು ಪ್ರಯತ್ನ ಮಾಡಲೇಬೇಕು."

ಇನ್ನೊಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಪ್ರತಿಯೊಬ್ಬನೊಂದಿಗೆ ಅವನ ಶಕ್ತಿಸಾಮರ್ಥ್ಯಗಳ ಪ್ರಕಾರ ವರ್ತಿಸಲಾಗುವುದು. ಶರೀಅತ್ ಮೃದುತ್ವವನ್ನೂ ಸುಲಭತೆಯನ್ನೂ ನೀಡುತ್ತದೆ. ಅಲ್ಲಾಹನು ಶಕ್ತಿಸಾಮರ್ಥ್ಯಗಳ ಪ್ರಕಾರ ಕರ್ಮ ಮಾಡಲು ಹೇಳಿ ಕನಿಷ್ಠ ಮತ್ತು ಗರಿಷ್ಠ ಪರಿಮಿತಿಗಳನ್ನು ನಿಶ್ಚಯಿಸಿದ್ದಾನೆ. ಪ್ರತಿಯೊಬ್ಬನ ಬುದ್ಧಿ ಮತ್ತು ಜ್ಞಾನವನ್ನು ಅವಲಂಭಿಸಿ ಮನುಷ್ಯನ ಕರ್ಮಗಳಿಗೆ ಪರಿಮಿತಿಗಳಿವೆ.

ಮನುಷ್ಯನು ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ವಿಶ್ವಾಸ ಹೊಂದಬೇಕು. ಚಿಕ್ಕ ಮಟ್ಟದ ಬುದ್ಧಿ ಶಕ್ತಿ ಹೊಂದಿದವರಿಗೂ ಅಲ್ಲಾಹನು ಅನುಷ್ಠಾನದ ಮಟ್ಟವನ್ನು ನಿಗದಿಪಡಿಸದೆ ಇರುತ್ತಿದ್ದರೆ ಎಲ್ಲಾ ಜನರು ಸತ್ಯ ವಿಶ್ವಾಸಿಗಳಾಗಲು ಸಾಧ್ಯವಾಗುತ್ತಿರಲಿಲ್ಲ. ಆವಶ್ಯಕವಾಗಿಯೂ ಅವರು ಸತ್ಯವಿಶ್ವಾಸಿಗಳಾಗಲು ನಿರ್ಬಂಧಿತರಾಗುತ್ತಿರಲಿಲ್ಲ. ಯಾಕೆಂದರೆ ಉನ್ನತ ಮಟ್ಟದ ಬುದ್ಧಿಶಾಲಿಗಳು ಮಾತ್ರ ಹೆಚ್ಚು ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವರಾದುದರಿಂದ ಸತ್ಯವಿಶ್ವಾಸಿಗಳಾಗಲು ನಿರ್ಬಂಧಿತರಾಗುತ್ತಿದ್ದರು. ಒಬ್ಬನಿಗೆ ಒಂದು ವಿಷಯ ಅರ್ಥವಾಗದಿದ್ದರೆ ಅವನು ಆ ವಿಷಯಕ್ಕೆ ಸಂಬಂಧಿಸಿದ ಆಜ್ಞೆ ಪಾಲಿಸಲಿಲ್ಲ ಎಂಬ ಆರೋಪ ಹೊರಿಸಲು ಸಾಧ್ಯವಿಲ್ಲ. ಆದುದರಿಂದ ಅಲ್ಲಾಹನು ಕೆಳಮಟ್ಟದ ಬುದ್ಧಿಮತ್ತೆಯನ್ನು ಹೊಂದಿದವರಿಂದ ಮೊದಲುಗೊಂಡು ಉನ್ನತ ಮಟ್ಟದ ಬುದ್ಧಿಶಾಲಿಗಳಿಗೂ ಅವರ ವಿವಿಧ ಸ್ಥಾನಗಳಿಗೆ ಅನುಸಾರವಾಗಿ ಅನುಷ್ಠಾನದ ಮಟ್ಟವನ್ನು ನಿಗದಿಪಡಿಸಿರುತ್ತಾನೆ. ಒಬ್ಬ ಬಹಳ ಬುದ್ಧಿಶಾಲಿ. ಇನ್ನೊಬ್ಬ ಕಡಿಮೆ ಬುದ್ಧಿಯುಳ್ಳವ. ಒಬ್ಬನಲ್ಲಿ ಹೆಚ್ಚು ಶಕ್ತಿ ಸಾಮರ್ಥ್ಯಗಳಿವೆ. ಇನ್ನೊಬ್ಬನಲ್ಲಿ ಕಡಿಮೆ ಶಕ್ತಿಸಾಮರ್ಥ್ಯಗಳಿವೆ. ಲೌಕಿಕ ವ್ಯವಹಾರಗಳಲ್ಲೂ ನಾವು ಇದನ್ನು ಕಾಣುತ್ತೇವೆ. ಒಬ್ಬನು ದೊಡ್ಡ ಕೆಲಸ ಮಾಡುವ ಸಾಮರ್ಥ್ಯ ಹೊಂದಿ ಬಹಳ ಮುಂದೆ ಸಾಗುತ್ತಾನೆ. ಇನ್ನೊಬ್ಬ ಮಧ್ಯದಲ್ಲಿ ಉಳಿದು ಬಿಡುತ್ತಾನೆ. ಮತ್ತೊಬ್ಬ ಬಹಳ ಹಿಂದೆ ಬೀಳುತ್ತಾನೆ. ಇದೊಂದು ಪ್ರಕೃತಿ ನಿಯಮವಾಗಿದೆ. ವಿವಿಧ ಕೆಲಸಗಳಲ್ಲಿರುವ ಆಸಕ್ತಿ ಅವುಗಳಲ್ಲಿ ಜಯ ಹೊಂದುವ ಕಡೆಗೆ ಅವನನ್ನು ಒಯ್ಯುತ್ತದೆ. ಯಾವುದೇ ಮನುಷ್ಯ ಇನ್ನೊಬ್ಬನಿಗೆ ಸಮವಾಗಿರುವುದಿಲ್ಲ. ಅಲ್ಲಾಹನು ಸಮವಾಗಿ ಸೃಷ್ಟಿಸಿಯೂ ಇಲ್ಲ. ಪರಿಸ್ಥಿತಿಗಳು ಸಹ ಅವನನ್ನು ಸಮವಾಗಿ ಇರಿಸಲು ಸಾಧ್ಯವಿಲ್ಲ. ಮನುಷ್ಯನ ಶಕ್ತಿ ಸಾಮರ್ಥ್ಯಗಳು ವಿಭಿನ್ನವಾಗಿರುತ್ತವೆ. ಸಮಾನವಾದ ಸಂದರ್ಭಗಳನ್ನು ನೀಡಿದರೂ ಸಹ ಒಬ್ಬ ಮುಂದೆ ಸಾಗುತ್ತಾನೆ ಇನ್ನೊಬ್ಬ ಹಿಂದೆ ಉಳಿಯುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರಲ್ಲಿ ಸಹ ಇದೇ ಸ್ಥಿತಿ ಇದೆ. ಒಬ್ಬ ಮುಂದೆ ಸಾಗುತ್ತಾನೆ ಇನ್ನೊಬ್ಬ ಹಿಂದೆ ಬಾಕಿಯಾಗಿ ಇರುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುವುದು, ಜನರು ಏಕೆ ವಿಶ್ವಾಸಿಗಳಾಗುವುದಿಲ್ಲ? ಎಂದು. ನೀವು ನಿಮ್ಮ ಅಂತಿಮಗತಿ ಏಕೆ ಹಾಳು ಮಾಡುತ್ತಿರುವಿರಿ? ಎಂದು ಅಲ್ಲಾಹನು ಕೇಳುತ್ತಾನೆ. ಆದರೆ, "ನೀವು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಹಾಗೆ ಮತ್ತು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಹಾಗೆ ಆ ಮಟ್ಟವನ್ನು ನೀವು ಯಾಕೆ ತಲಪಲಿಲ್ಲ" ಎಂದು ಪವಿತ್ರ ಖುರ್‌ಆನ್ ಕೇಳುವುದಿಲ್ಲ.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಒಬ್ಬ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾಗಿ ಇಸ್ಲಾಮ್ ಬಗ್ಗೆ ವಿಚಾರಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿದಿನ ಐದು ಹೊತ್ತು ನಮಾಝ್ ಮಾಡುವುದು ಕಡ್ಡಾಯವಾಗಿದೆ. ಇವುಗಳ ಹೊರತು ಬೇರೇನಾದರೂ ನಮಾಝ್ ಇದೆಯೇ ಎಂದು ವಿಚಾರಿಸಿದಾಗ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬೇರೆ ನಮಾಝ್ ಕಡ್ಡಾಯವಾಗಿಲ್ಲ. ಆದರೆ ನಫ್ಲ್ ನಮಾಝ್ ಮಾಡಲು ಬಯಸುವುದಾದರೆ ಮಾಡಬಹುದು. ಅನಂತರ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸುವುದು ಕಡ್ಡಾಯವಾಗಿದೆ. ಆಗ ಆ ವ್ಯಕ್ತಿ ಕೇಳಿದರು: ಇವುಗಳಲ್ಲದೆ ಬೇರೆ ಉಪವಾಸ ಕಡ್ಡಾಯವಾಗಿದೆಯೋ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬೇರೆ ಉಪವಾಸಗಳು ಕಡ್ಡಾಯವಾಗಿಲ್ಲ. ನೀನು ಇಚ್ಛಿಸುವುದಾದರೆ ನಫ್ಲ್ ಉಪವಾಸ ಅನುಷ್ಠಿಸಬಹುದು. ಅನಂತರ ಪ್ರವಾದಿಯವರು ಝಕಾತ್ ಬಗ್ಗೆ ಹೇಳಿದಾಗ– ಬೇರೆ ಝಕಾತ್‌ಗಳು ಇವೆಯೋ ಎಂದು ವಿಚಾರಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬೇರೆ ಕಡ್ಡಾಯವಾದ ಝಕಾತ್ ಇಲ್ಲ. ಆದರೆ ನೀನು ಇಚ್ಛಿಸುವುದಾದರೆ ನಫ್‌ಲೀ ಸದ್‌ಖ ನೀಡಬಹುದು. ಈ ಮಾತುಗಳನ್ನು ಆಲಿಸಿ ಆ ವ್ಯಕ್ತಿ "ಅಲ್ಲಾಹನಾಣೆ ನಾನು ಇವುಗಳಿಗಿಂತ ಹೆಚ್ಚಾಗಲಿ ಕಡಿಮೆಯಾಗಲಿ ಮಾಡಲಾರೆನು" ಎಂದು ಹೇಳಿ ಹೊರಟುಹೋದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಈ ವ್ಯಕ್ತಿ ಹೇಳಿದುದು ಸತ್ಯವಾದರೆ ಆ ವ್ಯಕ್ತಿ ಜಯಶಾಲಿಯಾದನೆಂದು ಭಾವಿಸಿರಿ. ಆ ವ್ಯಕ್ತಿ ಜಯಶಾಲಿಯಾಗುವರೆಂದು ಹೇಳಿ ಸ್ವರ್ಗದ ಶುಭವಾರ್ತೆ ನೀಡಿದರು.

ಮೇಲಿನ ಹದೀಸಿನಿಂದ ತಿಳಿಯುವುದೇನೆಂದರೆ ಇಸ್ಲಾಮ್ ಪ್ರತಿಯೊಬ್ಬನೂ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೊಂದಿದ್ದ ವಿಶ್ವಾಸದ ಮಟ್ಟವನ್ನು ತಲಪಬೇಕೆಂದು ಆವಶ್ಯಪಡುವುದಿಲ್ಲ. ಪ್ರತಿಯೊಬ್ಬನಿಗೆ ವಿವಿಧ ಸ್ಥಾನ, ಶಕ್ತಿ ಮತ್ತು ವಿಶ್ವಾಸದ ಮಟ್ಟಗಳಿವೆ. ಖಂಡಿತವಾಗಿಯೂ ನಫ್ಲ್‌ಗಳಿಂದ ಹೆಚ್ಚಿನ ಅನುಗ್ರಹ ಸಿಗುತ್ತದೆ. ಮತ್ತು ಅವುಗಳು ಫರ್ಝ್ (ಕಡ್ಡಾಯ) ಅನುಷ್ಠಾನಗಳಲ್ಲಿ ಉಂಟಾದ ಲೋಪದೋಷಗಳನ್ನು ನಿವಾರಿಸುತ್ತವೆ. ಸತ್ಯವಿಶ್ವಾಸ ವರ್ಧಿಸುವಂತೆ ಮಾಡುತ್ತವೆ. ಆದರೆ ಪ್ರತಿಯೊಬ್ಬನಿಗೆ ಅವನು ಯಾವ ಸ್ಥಿತಿಯಲ್ಲಿದ್ದರೂ ನಫ್ಲ್ ಕಡ್ಡಾಯವಾಗಿದೆ ಎಂದು ಆಜ್ಞಾಪಿಸಲಿಲ್ಲ.

ಒಂದು ವಿಷಯ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅಲ್ಲಾಹನ ದೃಷ್ಟಿ ನಮ್ಮ ಹೃದಯಗಳ ತಳಸ್ಪರ್ಶಿಯಾಗಿದೆ. ಕಡಿಮೆ ಜ್ಞಾನ, ಕಡಿಮೆ ಶಕ್ತಿಸಾಮರ್ಥ್ಯ, ಕಡಿಮೆ ಬುದ್ಧಿ ಇವುಗಳ ಯಾವ ರೀತಿಯ ನೆಪವೂ ಅಲ್ಲಾಹನ ಸನ್ನಿಧಿಯಲ್ಲಿ ಅಂಗೀಕಾರ ಪಡೆಯಲಾರದು. ಆದುದರಿಂದ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಪರಿಶೀಲಿಸಿ ನಮ್ಮ ವಿಶ್ವಾಸ ಮತ್ತು ಕರ್ಮಗಳ ಸ್ಥಿತಿಯನ್ನು ಪರೀಕ್ಷಿಸಬೇಕು. ನಾವು ಅತ್ಯಂತ ಕಡಿಮೆ ಮಟ್ಟದಲ್ಲಿದ್ದರೂ ನಮಗೆ ತೊಂದರೆ ಇಲ್ಲ ಎಂದು

ಭಾವಿಸಬಾರದು. ನಮ್ಮಲ್ಲಿ ಹಲವರು ಅಲ್ಲಾಹನ ಆಜ್ಞೆ ಪ್ರಕಾರ ಕಡ್ಡಾಯ ನಮಾಝ್‌ಗಳನ್ನು ಸಹ ಅನುಷ್ಠಿಸುವುದಿಲ್ಲ. ಪುರುಷರು ಜಮಾಅತ್‌ನೊಂದಿಗೆ ನಮಾಝ್ ಮಾಡುವುದು ಫರ್ಝ್ ಆಗಿದೆ. ಆದುದರಿಂದ ನೀವು ನೆನಪಿಡಿರಿ. ನೀವು ಅಲ್ಲಾಹನಿಗೆ ಯಾವತ್ತೂ ಮೋಸಮಾಡಲು ಸಾಧ್ಯವಿಲ್ಲ. ಲೌಕಿಕ ಕೆಲಸ ಮಾಡಲು ಪ್ರಯತ್ನ ಮಾಡುವ ಹಾಗೆ ಅದಕ್ಕಿಂತ ಹೆಚ್ಚು ಧಾರ್ಮಿಕ ಕೆಲಸಗಳ ಬಗ್ಗೆ ಪ್ರಯತ್ನ ಮಾಡಬೇಕು. ನಮ್ಮ ಶಕ್ತಿ ಸಾಮರ್ಥ್ಯಗಳನ್ನೂ ವರ್ಧಿಸಲು ಸಹ ಪ್ರಯತ್ನ ಮಾಡಬೇಕು. ಲೌಕಿಕ ನಿಯಮಗಳ ಪ್ರಕಾರ ಒಬ್ಬನ ಮೇಲೆ ಅವನ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರ ಹೊರಿಸಲೂಬಹುದು. ಆದರೆ ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹೀಗೆ ಆಗುವುದಿಲ್ಲ. ಕನಿಷ್ಠ ಮಟ್ಟದ ಬಗ್ಗೆ ಪ್ರಸ್ತಾಪಿಸಿರುವುದರಿಂದ ಶಕ್ತಿಗೆ ಮೀರಿ ಭಾರ ಹೊರಿಸುವ ಪ್ರಶ್ನೆಯೇ ಉದಿಸುವುದಿಲ್ಲ. ಆದರೆ ಕೆಲವು ವಿಷಯಗಳನ್ನು ಮನವರಿಕೆ ಮಾಡಿಕೊಳ್ಳಲು ಕೆಲವು ಸಹಾಯಗಳ ಆವಶ್ಯಕತೆ ಇರುತ್ತದೆ. ಲೌಕಿಕ ವ್ಯವಹಾರದಲ್ಲೂ ಇವುಗಳ ಆವಶ್ಯಕತೆ ಇರುತ್ತದೆ. ಬಲಹೀನ ಸತ್ಯವಿಶ್ವಾಸಿಗಳು ಈ ಸಹಾಯಗಳ ಕಡೆಗೆ ತಿರುಗಬೇಕು. ಒಬ್ಬ ಬಲಹೀನ ವಿದ್ಯಾರ್ಥಿ ಅಧ್ಯಾಪಕನನ್ನು ಪದೇ ಪದೇ ಸಮೀಪಿಸಿ ತನ್ನ ಪಾಠವನ್ನು ಮನವರಿಕೆ ಮಾಡಲು ಪ್ರಯತ್ನಿಸುವ ಹಾಗೆ. ಅಧ್ಯಾಪಕನ ಪ್ರಯತ್ನದಿಂದ ಆ ವಿದ್ಯಾರ್ಥಿಯ ವಿದ್ಯಾಭ್ಯಾಸದ ಮಟ್ಟ ಉತ್ತಮಗೊಳ್ಳುತ್ತದೆ. ಆದರೆ ಅಧ್ಯಾಪಕ ಸಹಾಯ ಮಾಡದಿದ್ದರೆ ವಿದ್ಯಾರ್ಥಿ ಬಹಳ ಹಿಂದೆ ಬೀಳುತ್ತಾನೆ. ಆದರೆ ವಿದ್ಯಾರ್ಥಿಗೆ ಸಹಾಯ ಮಾಡದ ಅಧ್ಯಾಪಕನು ತನ್ನ ಕರ್ತವ್ಯಗಳನ್ನು ಸರಿಯಾಗಿ ಈಡೇರಿಸುವುದಿಲ್ಲ ಎಂದು ತಿಳಿದುಕೊಳ್ಳಬೇಕಾಗಿದೆ. ಅವನು ತನ್ನ ಕೆಲಸದಲ್ಲಿ ವಿಶ್ವಾಸ ವಂಚನೆ ಮಾಡುತ್ತಾನೆ. ಇದೇ ರೀತಿ ಧರ್ಮ ಕಲಿಸಲು ನೇಮಿಸಲಾದ ಅಧ್ಯಾಪಕರ ಬಗ್ಗೆ ಸಹ ಇಲ್ಲಿ ನಾನು ಮಾತನಾಡಲು ಇಚ್ಛಿಸುತ್ತೇನೆ. ನಮ್ಮ ಮುರಬ್ಬಿ, ಮುಬಲ್ಲಿಗ್ ಮತ್ತು ವಿದ್ವಾಂಸರು ಅಲ್ಲಾಹನು ಅವರಿಗೆ ನೀಡಿದ ಶಕ್ತಿಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಿಸಬೇಕು. ಬಲಹೀನರಾದವರ ಶಕ್ತಿಸಾಮರ್ಥ್ಯಗಳನ್ನು ಹೆಚ್ಚಿಸಲು ಅವರು ಪ್ರಯತ್ನಿಸಬೇಕು. ಅದು ನಿಮಗೆ ಅಲ್ಲಾಹನು ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಿದಂತೆ ಆಗುವುದು. ಅಲ್ಲಾಹನಿಗೆ ಸರಿಯಾಗಿ ಕೃತಜ್ಞತೆ ಅರ್ಪಿಸದಿದ್ದರೆ ಮನುಷ್ಯನು ಪಾಪದೋಷವನ್ನು ಅನುಭವಿಸುವನು.

ಆದುದರಿಂದ ಮುಬಲ್ಲಿಗರಿಗೆ ಮತ್ತು ಮುಅಲ್ಲಿಮರಿಗೆ ಅಲ್ಲಾಹನು ಹೇಳಿದ್ದಾನೆ. ನೀವು ವಿದ್ಯೆಗಳಿಸಿದ ಕಾರಣ ನಿಮ್ಮ ಶಕ್ತಿಸಾಮರ್ಥ್ಯಗಳು ವರ್ಧಿಸಿವೆ. ಅವುಗಳನ್ನು ನಿಮ್ಮ ಸಹೋದರರ ಶಕ್ತಿ ಸಾಮರ್ಥ್ಯಗಳನ್ನು ವರ್ಧಿಸಲಿಕ್ಕೋಸ್ಕರ ಬಳಸಿರಿ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ವಲ್‌ತಕುನ್ ಮಿನ್‌ಕುಮ್ ಉಮ್ಮತನ್ ಯದ್‌ಊನ ಇಲಲ್ ಖೈರ್.** "ನಿಮ್ಮಲ್ಲಿ ಇಂತಹ ಒಂದು ಗುಂಪು ಸಹ ಇರಬೇಕು. ಅವರ ಕೆಲಸ ಜನರನ್ನು ಒಳಿತಿನ ಕಡೆಗೆ ಕರೆಯುವುದು ಮಾತ್ರವಾಗಿರಬೇಕು." ಅವರು ಜಮಾಅತಿನ ತರಬೇತಿ ಬಗ್ಗೆ ಪೂರ್ಣವಾಗಿ ಶ್ರದ್ಧೆ ನೀಡಬೇಕು. ಅವರು ಧಾರ್ಮಿಕ ವಿದ್ಯೆ ಕಲಿತುಕೊಂಡದ್ದು ಕೆಲವು ಸಂದರ್ಭಗಳಲ್ಲಿ ಭಾಷಣ ಮಾಡಲು, ವಾದ ವಿವಾದಗಳಲ್ಲಿ ಭಾಗವಹಿಸಲು ಅಥವಾ ಕೆಲವು ಜನರಿಗೆ ತಬ್ಲೀಗ್ ಮಾಡಲು ಮಾತ್ರ ಅಲ್ಲ. ಬದಲಾಗಿ ಅವರು ನಿರಂತರವಾಗಿ ಈ ಕೆಲಸದಲ್ಲಿ ಮಗ್ನರಾಗಿರಬೇಕು. ಇದು ಅವರ ಕಡ್ಡಾಯ ಕರ್ತವ್ಯವಾಗಿದೆ. ಅವರು ತಮ್ಮವರ ತರಬೇತಿ ಮಾಡುತ್ತಿರಬೇಕು. ಅವರ ವಿಶ್ವಾಸ ವರ್ಧಿಸುವಂತೆ ಮಾಡುತ್ತಾ ಇರಬೇಕು. ಲೋಕವನ್ನು ಒಳಿತಿನ ಕಡೆಗೆ ಕರೆಯಲು ಹೊಸ ಹೊಸ ಮಾರ್ಗಗಳನ್ನು ಅವರು ಆವಿಷ್ಕರಿಸಬೇಕು. ಆದರೆ ಕೆಲವರು ತಮ್ಮ ಕರ್ತವ್ಯಗಳ ಕಡೆಗೆ ಶ್ರದ್ಧೆ ನೀಡುವುದರ ಬದಲು ತಮ್ಮ ಮನೆಗಳ ಆವಶ್ಯಕತೆಗಳ ಕಡೆಗೆ ಹೆಚ್ಚು ಗಮನ ನೀಡುತ್ತಿದ್ದಾರೆ. ಕೆಲವರು ತಮ್ಮ ಸ್ವಂತ ವ್ಯಕ್ತಿತ್ವದ ಬಗ್ಗೆ ಆವಶ್ಯಕ್ಕಿಂತ ಹೆಚ್ಚು ಶ್ರದ್ಧೆ ನೀಡುತ್ತಾರೆ. ವಾರದಲ್ಲಿ ಮೂರು ದಿನ ಅಂಗಡಿಗಳಲ್ಲಿ ತಿರುಗುತ್ತಾ ಇರುತ್ತಾರೆ.

ವಾಕಿಫೀನೆ ಝಿಂದಗಿ (ತಮ್ಮ ಜೀವಿತವನ್ನು ಜಮಾಅತಿಗೋಸ್ಕರ ಅರ್ಪಿಸಿದವರು) ತಮ್ಮ ಸ್ವಂತ ಇಚ್ಛೆ ಪ್ರಕಾರ ಅಲ್ಲಾಹನ ಕರೆಗೆ ಉತ್ತರ ನೀಡಿ ಈ ಕೆಲಸದಲ್ಲಿ ಪ್ರವೇಶಿಸಿದ್ದಾರೆ. ಅವರಿಗೆ ನೀಡಲಾದ ವಿದ್ಯೆ ಮತ್ತು ಅವರ ಅರ್ಪಣೆ ಆವಶ್ಯಪಡುವುದೇನೆಂದರೆ ಅವರು ತಮ್ಮ ಕರ್ತವ್ಯಗಳನ್ನು ಈಡೇರಿಸಬೇಕು ಎಂದಾಗಿದೆ. ಈ ವಿದ್ಯೆ ಕಲಿಯುವವರಲ್ಲಿ ಮತ್ತು ಕಲಿಸುವವರಲ್ಲಿ ಎಲ್ಲರೂ ಸಮಾನರಲ್ಲ ಎನ್ನುವುದು ಸತ್ಯವೇ ಆಗಿದೆ. ಪ್ರತಿಯೊಬ್ಬ ತನ್ನದೇ ಆದ ಶಕ್ತಿಸಾಮರ್ಥ್ಯ ಹೊಂದಿರುತ್ತಾರೆ. ಎಲ್ಲರೂ ಒಂದೇ ರೀತಿಯ ಲಾಭ ಅನ್ಯರಿಗೆ ತಲಪಿಸಲಾರರು. ಅನ್ಯರ ಶಕ್ತಿಸಾಮರ್ಥ್ಯಗಳನ್ನು ಉತ್ತೇಜಿಸುವ ವಿಷಯದಲ್ಲಿ ಸಹ ಪ್ರತಿಯೊಬ್ಬ ಸಮಾನವಾಗಿ ಶಕ್ತನಾಗಲಾರ. ಪ್ರತಿಯೊಬ್ಬನ ಕಲಿಯುವ ಮತ್ತು ಕಲಿಸುವ ಶಕ್ತಿ ಬೇರೆ ಬೇರೆ ಯಾಗಿರುತ್ತದೆ. ಆದರೆ ಎಷ್ಟು ಶಕ್ತಿಸಾಮರ್ಥ್ಯ ಒಬ್ಬನಿಗಿದೆಯೋ ಅದನ್ನು ಅವನು ಅತ್ಯುತ್ತಮ ರೀತಿಯಲ್ಲಿ ಬಳಸಲು ಪ್ರಯತ್ನಿಸಬೇಕು. ಈ ರೀತಿ ಪ್ರತಿಯೊಬ್ಬರೂ ಪ್ರಜ್ಞೆಯಿಂದ ಪ್ರಯತ್ನ ಮಾಡಿದರೆ ಅವರು ತಮ್ಮ ಬಲಹೀನ ಸಹೋದರರಿಗೆ ಪ್ರಯೋಜನಕರವಾಗುವುದಲ್ಲದೆ ಜಮಾಅತಿನ ಮಟ್ಟ ಸಹ ಉನ್ನತಗೊಳ್ಳುವಂತೆ ಮಾಡುವವರಾಗುವರು.

ಇನ್ನು ಹುದ್ದೇದಾರರ ಬಗ್ಗೆ ಹೇಳುವುದಾದರೆ ಜಮಾಅತಿನ ಸದಸ್ಯರು ಅವರನ್ನು ಹುದ್ದೇದಾರರನ್ನಾಗಿ ಆಯ್ಕೆ ಮಾಡುವುದು ಏಕೆಂದರೆ ಅವರು ಶಕ್ತಿಸಾಮರ್ಥ್ಯಗಳಲ್ಲೂ ವಿದ್ಯೆಯಲ್ಲೂ ಬುದ್ಧಿಯಲ್ಲೂ ನಮಗಿಂತ ಉತ್ತಮರಾಗಿದ್ದಾರೆ ಎಂಬ ಭಾವನೆಯಿಂದಾಗಿದೆ. ಹುದ್ದೇದಾರರನ್ನು ಆಯ್ಕೆ ಮಾಡುವಾಗ ಇಂತಹ ಮನೋಭಾವನೆ ಇದ್ದರೆ ಯಾರೂ ಕೇವಲ ಹುದ್ದೆ ಅಲಂಕರಿಸಲು ಆಯ್ಕೆಗೊಳ್ಳಲಾರರು. ಆದುದರಿಂದ ಹುದ್ದೇದಾರರು ಜಮಾಅತಿನ ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಸಂಬಂಧಿಸಿದ ಮಟ್ಟವನ್ನು ಉನ್ನತಗೊಳಿಸಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಸದಸ್ಯನ ಮಟ್ಟ ಅವನವನ ಸ್ಥಿತಿಗನುಸಾರವಾಗಿ ವರ್ಧಿಸಬೇಕಾಗಿದೆ. ತರಬೇತಿಗೆ ಸಂಬಂಧಿಸಿ ಹೇಳುವುದಾದರೆ, ತರ್‌ಬಿಯತ್ ಸೆಕ್ರಟರಿ ಮತ್ತು ಅಧ್ಯಕ್ಷರು ಇವರ ಜೊತೆಗೆ ಉಳಿದ ಹುದ್ದೇದಾರರೂ ಸಹ ತಮ್ಮ ಮಾದರಿ ವರ್ತನೆಯಿಂದ

ಅನ್ಯರ ತರಬೇತಿ ಮಾಡಬೇಕಾಗಿದೆ. ಖುತ್‌ಬಗಳನ್ನು ಆಲಿಸುವುದು, ದರ್ಸ್ ಆಲಿಸುವುದು, ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮೊದಲಾದವುಗಳ ಮೂಲಕ ಜ್ಞಾನ ಮತ್ತು ಆಧ್ಯಾತ್ಮಿಕ ವರ್ಧನೆಗಳು ಉಂಟಾಗುತ್ತವೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುವುದು, ಜಲ್ಸಗಳ ಲಾಭ ಪಡೆಯುವುದು ಮೊದಲಾದವುಗಳ ಬಗ್ಗೆ ಹುದ್ದೇದಾರರೂ ಮುಬಲ್ಲಿಗರೂ ಯಾವಾಗಲೂ ಗಮನ ಹರಿಸಬೇಕು. ಇದು ಅವರ ಕಡ್ಡಾಯ ಕರ್ತವ್ಯವಾಗಿದೆ.

ಕೆಲವು ಮುಬಲ್ಲಿಗರು ಬಹಳ ಉತ್ತಮ ರೀತಿಯಲ್ಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ನನ್ನ ಖುತ್‌ಬದ ಬಗ್ಗೆ ಶ್ರದ್ಧೆ ವಹಿಸುತ್ತಾರೆ. ಅವರು ತಮ್ಮ ದರ್ಸ್‌ಗಳಲ್ಲಿ ಮತ್ತು ಚರ್ಚಾಕೂಟಗಳಲ್ಲಿ ವಾರವಿಡೀ ಯಾವುದಾದರೂ ಒಂದು ಅಂಶದ ಬಗ್ಗೆ ಚರ್ಚೆ ನಡೆಸುತ್ತಾ ಇರುತ್ತಾರೆ. ಇದರಿಂದ ಜಮಾಅತಿನ ಸದಸ್ಯರ ಮೇಲೆ ಉತ್ತಮ ಪ್ರಭಾವ ಉಂಟಾಗುತ್ತದೆ. ಕೆಲವರು ಹೀಗೆ ಭಾವಿಸುತ್ತಾರೆ– ನಾವು ನಮ್ಮ ದರ್ಸ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖ ಓದಿದೆವು. ಅಥವಾ ಜನರು ಖಲೀಫರ ಖುತ್‌ಬ ಆಲಿಸಿದ್ದಾರೆ. ನಾವು ಅದನ್ನು ಪದೇ ಪದೇ ಪುನರಾವರ್ತಿಸಿ ಹೇಳಬೇಕಾಗಿಲ್ಲ. ಅವುಗಳ ಬಗ್ಗೆ ನೆನಪಿಸುವ ಅಗತ್ಯವಿಲ್ಲ, ಎಂದೆಲ್ಲಾ ಭಾವಿಸುವುದಾದರೆ ಅವರು ತಪ್ಪು ಮಾಡುತ್ತಾರೆ. ಇನ್ನು ಕೆಲವರು, "ಖಲೀಫರ ಮಾತು ಪ್ರಭಾವ ನೀಡದಿದ್ದರೆ ನಮ್ಮ ಮಾತು ಹೇಗೆ ಪ್ರಭಾವಶಾಲಿಯಾಗುವುದು" ಎಂದು ಯೋಚಿಸುವವರೂ ಇದ್ದಾರೆ. ಇದು ಸಹ ತಪ್ಪಾಗಿದೆ. ನೆನಪಿಸಿ ಕೊಡುವುದು ಅತ್ಯಾವಶ್ಯಕವಾಗಿದೆ. ಒಂದು ಮುಖ್ಯ ವಿಷಯವೇನೆಂದರೆ ಕೆಲವರಿಗೆ ಕೆಲವು ವಿಷಯಗಳು ಅರ್ಥವಾಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳನ್ನು ಸರಳವಾಗಿ ನನ್ನ ಮಾತಿನಲ್ಲಿ ವಿವರಿಸಲು ನಾನು ಸಹ ಪ್ರಯತ್ನ ಮಾಡುತ್ತೇನೆ. ಆದರೆ ಇದರ ಬಗ್ಗೆ ನಾನು ವಿಚಾರಿಸಿದಾಗ ಕೆಲವರು ಹೇಳಿದರು– ನಮಗೆ ಅರ್ಥವಾಗುವುದಿಲ್ಲ ಎಂದು. ಅಥವಾ ಅವರು ತಪ್ಪಾಗಿ ಗ್ರಹಿಸಿದರು. ಆದುದರಿಂದ ಇವುಗಳನ್ನು ಸರಳವಾಗಿ ಜನರಿಗೆ ವಿವರಿಸಿ ಕೊಡುತ್ತಾ ಇದ್ದರೆ ಅರ್ಥವಾಗದವರಿಗೂ ಮನವರಿಕೆ ಆಗುವುದು.

ಖುತ್‌ಬದ ಕಡೆಗೂ ಶ್ರದ್ಧೆ ನೀಡಬೇಕಾದುದು ಆವಶ್ಯಕವಾಗಿದೆ. ಖುತ್‌ಬದ ಸಮಯದಲ್ಲಿ ನಾನು ನೋಡಿದ್ದೇನೆ ಕೆಲವರು ನಿದ್ರೆದೂಗುತ್ತಿರುತ್ತಾರೆ. ಕೆಲವರಿಗೆ ಖುತ್‌ಬ ಸರಿಯಾಗಿ ಕೇಳಿಸುವುದಿಲ್ಲ. ಕೆಲವರಿಗೆ ಮನವರಿಕೆ ಆಗುವುದಿಲ್ಲ. ಕೆಲವರು ತಮ್ಮದೇ ಯೋಚನೆಗಳಲ್ಲಿ ಮುಳುಗಿರುತ್ತಾರೆ. ಇಂತಹ ಜನರು ಕೇವಲ ಖುತುಬ ಕೇಳಿದರು ಎಂದು ಹೇಳುವುದರಲ್ಲಿ ಏನು ಅರ್ಥವಿದೆ. ಆದುದರಿಂದ ಇಂತಹ ಜನರಿಗೆ ಖುತ್‌ಬದ ಬಗ್ಗೆ ಪುನಃ ನೆನಪಿಸುವುದು ಆವಶ್ಯಕವಾಗಿದೆ. ಖುತ್‌ಬದ ನಂತರ ಅದರ ಬಗ್ಗೆ ಅವರಿಗೆ ವಿವರಿಸಿಕೊಡಬೇಕು. ಜಲ್ಸಗಳ ಸಂದರ್ಭದಲ್ಲಿ ಕೆಲವರು ಘೋಷಣೆ ಕೂಗುವುದು ಕಂಡುಬರುತ್ತದೆ. ತಮ್ಮ ಸುತ್ತಲೂ ನಿದ್ರೆದೂಗುವವರನ್ನು ಎಚ್ಚರಗೊಳಿಸಲಿಕ್ಕಾಗಿ ಅಥವಾ ಅವರು ತಮ್ಮ ಸ್ವಂತ ನಿದ್ರೆಯನ್ನು ಹೋಗಲಾಡಿಸಲು ಆ ರೀತಿ ಮಾಡುತ್ತಿರಬಹುದು. ಭಾಷಣಗಳನ್ನು ಆಲಿಸುವುದು, ಖುತ್‌ಬ ಶ್ರದ್ಧೆಯಿಂದ ಆಲಿಸುವುದು ಅವುಗಳಲ್ಲಿ ಹೇಳಿದವುಗಳನ್ನು ಮಾಡುವುದು ಪ್ರತಿಯೊಬ್ಬನ ಸ್ವಂತ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿರುತ್ತದೆ. ಆದುದರಿಂದ ಜನರಿಗೆ ಇವುಗಳ ಬಗ್ಗೆ ನೆನಪಿಸುತ್ತಾ ಇದ್ದರೆ ಅವರ ಗ್ರಹಣ ಶಕ್ತಿ ವರ್ಧಿಸುತ್ತಾ ಹೋಗುವುದು. ಅವರ ಶಕ್ತಿಗಳೂ ವರ್ಧಿಸುವುದು.

ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಆವಶ್ಯಕವಾಗಿರುವುದು ಅನ್ಯರನ್ನೂ ತನ್ನೊಂದಿಗೆ ಮುಂದೆ ನಡೆಸಲು ಪ್ರಯತ್ನಿಸಬೇಕು ಎಂದಾಗಿದೆ. ಇದು ಕೇವಲ ಹುದ್ದೇದಾರರ ಮತ್ತು ಮುಬಲ್ಲಿಗರ ಕೆಲಸವಲ್ಲ. ಮಸ್‌ಜಿದ್‌ಗೆ ಸಮೀಪವಾಗಿ ವಾಸಿಸುವವರು ತಮ್ಮ ಸುತ್ತುಮುತ್ತಲಿನವರನ್ನು ನಮಾಝಿಗಾಗಿ ಮಸ್‌ಜಿದ್‌ಗೆ ಕರೆದುಕೊಂಡು ಬರಲು ಪ್ರಯತ್ನಿಸಬೇಕು. ಇದು ವಾಸ್ತವಿಕವಾದ ಇಸ್ಲಾಮೀ ಸಾಹೋದರ್ಯದ ಪ್ರಕಟಣೆ ಸಹ ಆಗಿದೆ. ಪರಸ್ಪರ ಶ್ರದ್ಧೆ ನೀಡುವುದು ಪ್ರೀತಿಯನ್ನು ಸಹ ವರ್ಧಿಸುತ್ತದೆ. ಜನರಿಗೆ ಅವರ ಕರ್ತವ್ಯಗಳ ಬಗ್ಗೆ ಗಮನ ಹರಿಸಬೇಕು. ಇದನ್ನು ಅಲ್ಲಾಹನು ಸತ್ಯ ವಿಶ್ವಾಸಿಗಳಿಗೆ ಕಡ್ಡಾಯ ಮಾಡಿದ್ದಾನೆ. ತಾವು ಅಭಿವೃದ್ಧಿ ಹೊಂದಿದ್ದರೆ ತಮ್ಮ ಸಹೋದರರನ್ನೂ ಕರೆದು ಅನುಗ್ರಹಗಳಿಸಲು ಹೇಳಬೇಕು. ಬಲಹೀನರನ್ನು ಜಾಗೃತಗೊಳಿಸಿ ಅವರನ್ನು ಮೇಲಕ್ಕೆ ತರಬೇಕು. ಈ ಕೆಲಸ ಮನುಷ್ಯನನ್ನು ಅಲ್ಲಾಹನ ಬಹುಮಾನಗಳ ವಾರೀಸುದಾರನನ್ನಾಗಿ ಮಾಡುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ಯಾರು ಇತರರನ್ನು ಒಳಿತಿನ ಕಡೆಗೆ ಒಯ್ಯುತ್ತಾನೋ ಅವನು ಒಳಿತು ಮಾಡುವವನಿಗೆ ದೊರೆಯುವಂತಹ ಪ್ರತಿಫಲಕ್ಕೆ ಅರ್ಹತೆ ಹೊಂದುತ್ತಾನೆ. ಜಮಾಅತಾಗಿ ನಮಾಝ್ ಮಾಡುವವನಿಗೆ ಇಪ್ಪತ್ತೇಳು ಪಟ್ಟು ಅನುಗ್ರಹ ಸಿಗುವುದು ಮಾತ್ರವಲ್ಲ ಅವನು ತನ್ನೊಂದಿಗೆ ಕರೆದುಕೊಂಡು ಹೋಗುವವರಿಗೆ ದೊರಕುವಂತಹ ಪ್ರತಿಫಲವನ್ನೂ ಸಹ ಗಳಿಸುವನು. ಉದಾಹರಣೆಗೆ ಒಬ್ಬನು ಮೂವರನ್ನು ನಮಾಝ್‌ಗೆ ಕರೆದುಕೊಂಡು ಬಂದರೆ ಅವನಿಗೆ ತನ್ನ ಸ್ವಂತ ನಮಾಝ್‌ಗೆ ಇಪ್ಪತ್ತೇಳು ಪಟ್ಟು ಅನುಗ್ರಹ ದೊರೆಯುದಲ್ಲದೆ ತಾನು ಕರೆದುಕೊಂಡ ಬಂದ ಜನರ ಮೂವರ ಅನುಗ್ರಹ ಸೇರಿ ಒಟ್ಟಿಗೆ ನೂರಎಂಟು ಪಟ್ಟು ಪ್ರತಿಫಲ ಅವನಿಗೆ ದೊರಕುವುದು. ಅಲ್ಲಾಹನು ತನ್ನ ದಾಸರಿಗೆ ಹೇಗೆಲ್ಲಾ ಅನುಗ್ರಹಗಳನ್ನು ನೀಡುತ್ತಾನೆಂದು ನೋಡಿರಿ.

ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ ಧರ್ಮದ ವಿಷಯದಲ್ಲಿ ಚುರುಕಾಗಬೇಕಲ್ಲದೆ ಇತರರನ್ನೂ ಸಹ ಚುರುಕಾಗಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಈ ಮನೋಭಾವದಿಂದ ಕೆಲಸ ಮಾಡಿದರೆ ನಾವು ಅನ್ಯರ ಶಕ್ತಿಸಾಮರ್ಥ್ಯಗಳನ್ನು ವರ್ಧಿಸುವುದರಲ್ಲಿ ಭಾಗೀದಾರರಾಗುವೆವು ಮಾತ್ರವಲ್ಲ ನಾವು ಸಹ ನಮ್ಮ

ಶಕ್ತಿಸಾಮರ್ಥ್ಯಗಳನ್ನು ವರ್ಧಿಸುವವರಾಗುವೆವು. ನಾವು ಒಂದೇ ಸ್ಥಳದಲ್ಲಿ ನಿಂತಿರಬಾರದು ಅಭಿವೃದ್ಧಿ ಹೊಂದುತ್ತಿರಬೇಕು ಎಂಬ ಭಾವನೆ ಉಂಟಾಗುವುದು. ನಾವು ಅನ್ಯರಿಗೆ ಒಳಿತನ್ನು ಮಾಡಿ ಹಲವು ಪಟ್ಟು ಒಳಿತು ಗಳಿಸುವವರಾಗುವೆವು. ಜಮಾಅತಿನ ಸಾಮೂಹಿಕ ಅಭಿವೃದ್ಧಿಗೂ ಇದು ಸಹಾಯಕವಾಗುವುದು. ಆ ರೀತಿ ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವರ್ಧಿಸುತ್ತಾ ಹೋಗಲು ಮತ್ತು ಅಲ್ಲಾಹನ ಅನುಗ್ರಹಗಳನ್ನು ಗಳಿಸುತ್ತಾ ಹೋಗಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ– ಆಮೀನ್.

ಜುಮುಅ ನಮಾಝ್‌ನ ನಂತರ ಎರಡು ನಮಾಝೆ ಜನಾಝಾ ಗಾಯಿಬ್ ಅನುಷ್ಠಿಸಲಾಯಿತು. ಒಂದು ಜನಾಝಾ, ಜನಾನುಲ್ ಅನಿ ಸಾಹಿಬ ಎಂಬ ಸಿರಿಯನ್ ಮಹಿಳೆಯದು. ಅವರು ಮೃತರಾಗುವಾಗ ತುರ್ಕಿಯಲ್ಲಿದ್ದರು. 13–1–2015ರಂದು ತನ್ನ 57ನೇ ವಯಸ್ಸಿನಲ್ಲಿ ಮೃತರಾದರು– إِنَّا لِلّٰهِ وَإِنَّا إِلَيْهِ رَاجِعُونَ . ಇನ್ನೊಂದು ಜನಾಝಾ ಮೆಕ್ಸಿಕೋ ದೇಶದ ಹಬೀಬ ಸಾಹಿಬ ಎಂಬ ಮಹಿಳೆಯದು. ಅವರು 19–1–2015ರಂದು ನೂರು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು 2014 ಜೂನ್ ತಿಂಗಳಲ್ಲಿ ಅಹ್ಮದಿಯಾ ಜಮಾಅತ್‌ಗೆ ಸೇರಿದರು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಅವರ ಸಂತಾನಗಳನ್ನು ಯಾವಾಗಲೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನೊಂದಿಗೆ ಜೋಡಿಸಿಡಲಿ– ಆಮೀನ್.

-------------*****------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 30-01-2015.*
Summarized by *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** M P Ibrahim | ***Typing:*** U Basheer Ahmad
*Published By:* **Kannada Isha'at Team** for **Nazarath Nashr-O-Isha'ath, Qadian**
***Email**: khutuba.kannada@gmail.com*